Publication : Kannada Prabha
Date: June 20, 2014
Page No: 3
Edition: All

SARA Media Net
Simply communicate...

• ಕೇಶವ

# ಅಪೂರ್ವ ಸಂಗಮ

ನಾನು ಸಿನಿಮಾ ಓದಿದ್ದು ಪೂನಾ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ. ಅವನು ಸಿಡ್ನಿಯ ಯೂನಿವರ್ಸಿಟಿ ಆಫ್ ಟೆಕ್ನಾಲಜಿಯಲ್ಲಿ ಫಿಲಂ ಮೇಕಿಂಗ್ ಪದವಿ ಮಾಡಿದ್ದಾನೆ...

ಹೀಗೆ ಹೇಳಿದ್ದು ನಿರ್ದೇಶಕ ಗಿರೀಶ್ ಕಾಸರವಳ್ಳಿ. ಅದು 'ನಿರುತ್ತರ' ಚಿತ್ರದ ಪ್ರತಿಕಾಗೋಷ್ಠಿ. ಈ ಚಿತ್ರದ ನಿರ್ದೇಶಕ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ. ಹೀಗಾಗಿ 'ಇದು ಕಲಾತ್ಮಕ ಚಿತ್ರವೋ ಅಥವಾ ಕಮರ್ಷಿಯಲ್ ಚಿತ್ರವೋ?' ಎನ್ನುವ ಪ್ರಶ್ನೆ ಅಪೂರ್ವ ಅವರಿಗೆ ಎದುರಾಯಿತು. ಈ ಪ್ರಶ್ನೆಗೆ ಉತ್ತರಿಸಿದ ಗಿರೀಶ್ ಕಾಸರವಳ್ಳಿ, 'ನನ್ನ ಸಿನಿಮಾ ರುಚಿಯೇ ಬೇರೆ. ಅವನ ಸಿನಿಮಾ ಆಸಕ್ತಿಯೇ ಬೇರೆ. ನಾನು ಏಷಿಯಾ ಸಿನಿಮಾವನ್ನು ನೆಚ್ಚಿಕೊಂಡವನು. ಅವನು ಯೂರೋಪಿಯನ್ ಸಿನಿಮಾಗಳ ವೀಕ್ಷಕ. ಎಲ್ಲಕ್ಕಿಂತ ಮುಖ್ಯವಾಗಿ ನಾನು ಓದಿದ್ದು ಪೂನಾದಲ್ಲಿ. ಅವನು ಓದಿದ್ದು, ಸಿಡ್ನಿ ಸ್ಕೂಲ್‌ನಲ್ಲಿ. ಅವನು ಕಾಸರವಳ್ಳಿ ಕುಟುಂಬದವನಾದರೂ ಅವನಿಗೇ ಅಂತ ಒಂದು ಸಿನಿಮಾ ಕನಸು ಇದೆ. ಅದನ್ನು 'ನಿರುತ್ತರ' ಚಿತ್ರದ ಮೂಲಕ ಹೇಳುತ್ತಾನೆ ಎಂದುಕೊಂಡಿದ್ದೇನೆ' ಎನ್ನುವ ನಂಬಿಕೆ ವ್ಯಕ್ತಪಡಿಸಿದರು. ಓವರ್ ಟು ಅಪೂರ್ವ ಕಾಸರವಳ್ಳಿ...

ಅಪ್ಪನ ಚಿತ್ರಗಳಲ್ಲಿ ತೊಡಗಿಸಿಕೊಂಡಿದ್ದ ಅಪೂರ್ವ ಕಾಸರವಳ್ಳಿ ಅವರಿಗೆ 'ನಿರುತ್ತರ' ಮೊದಲ ಚಿತ್ರ. ಈ ಹಿಂದೆ 'ಮುತ್ತಿನ ತೋರಣ' ಧಾರಾವಾಹಿ ನಿರ್ದೇಶಿಸಿದ್ದ ಅಪೂರ್ವ, ಜಾಹೀರಾತು ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ಹಲವು ಚಿತ್ರಗಳಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 'ನಿರುತ್ತರ' ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. 'ನಾಲ್ಕು ಪಾತ್ರಗಳ ಸುತ್ತ ತಿರುಗುವ ಚಿತ್ರ. ಆ ನಾಲ್ಕು ಪಾತ್ರಗಳ ಪೈಕಿ ಬಾಲಿವುಡ್‌ನ ರಾಹುಲ್ ಬೋಸ್ ಒಂದು ಪಾತ್ರ ಮಾಡುವ ಸಾಧ್ಯತೆ ಇದೆ. ಉಳಿದಂತೆ ಭಾವನಾ, ಕಿರಣ್, ಐಂದ್ರಿತಾ ರೇ ನಟಿಸಲಿದ್ದಾರೆ. ನನಗೆ ಕಲಾತ್ಮಕ ಮತ್ತು ಕಮರ್ಷಿಯಲ್ ಎನ್ನುವ ಡಿವೈಡ್ ಪಾಲಿಸಿ ಇಲ್ಲ. ಈ ಚಿತ್ರದಲ್ಲಿ ಸಾಹಸ ದೃಶ್ಯಗಳು ಇಲ್ಲ ಎನ್ನುವುದು ಬಿಟ್ಟರೆ ಒಂದು ಸಿನಿಮಾಗೆ ಬೇಕಾದ ಎಲ್ಲ ಅಂಶಗಳೂ ಇವೆ. ನಾಲ್ಕು ಮಂದಿಯ ನಡುವೆ ಒಂದು ಪ್ರೇಮ ಕಥೆ ಸಾಗುತ್ತದೆ. ಅದು ಯಾರದು? ಎನ್ನುವುದು ಕಥೆಯ ಮತ್ತೊಂದು ತಿರುವು' ಎನ್ನುತ್ತಾರೆ ಅಪೂರ್ವ.

ನಟಿ ಭಾವನಾ ಸೋದರ ಅರವಿಂದ್ ರಾಮಣ್ಣ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇವೆಂಟ್ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಅರವಿಂದ್, ಮೊದಲ ಬಾರಿಗೆ ಚಿತ್ರ ನಿರ್ಮಾಣಕ್ಕೆ ಬಂದಿದ್ದಾರೆ. ವಿಕ್ರಮ್ ಹತ್ವಾರ್ ಅವರ ಕಥೆಯನ್ನು ಆಧರಿಸಿದ ಚಿತ್ರವಿದು. ಎಚ್.ಎಂ. ರಾಮಚಂದ್ರ ಚಿತ್ರಕ್ಕೆ ಛಾಯಾಗ್ರಹಣ ಮಾಡುತ್ತಿದ್ದಾರೆ. ಎಂದಿನಂತೆ ಮಾತು ಕಮ್ಮಿ, ಕೆಲಸ ಮುಖ್ಯ ಎನ್ನುವಂತಿದ್ದ ರಾಮಚಂದ್ರ ಮಾತನಾಡಲಿಲ್ಲ. 'ಇದು ನನಗೆ ಇಷ್ಟವಾದ ಪಾತ್ರ. ಕಥೆ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ತುಂಬಾ ಚೆನ್ನಾಗಿದೆ. ಸಾಮಾನ್ಯವಾಗಿ ನಾನು ಹೀರೋ ರೌಡಿಯಾಗಿದ್ದರೆ ಆ ಚಿತ್ರದಲ್ಲಿ ನಟಿಸಲ್ಲ. ಒಂದೇ ರೀತಿಯ ಪಾತ್ರಗಳು ಬರುತ್ತಿದ್ದವು. ನಾನು ಅವುಗಳನ್ನು ಒಪ್ಪಿಕೊಂಡಿಲ್ಲ. ಈ ಕಾರಣಕ್ಕೆ ನಟನೆ ಕಡಿಮೆಯಾದಂತೆ ಕಂಡಿದೆ. ಆದರೆ, 'ನಿರುತ್ತರ' ಚಿತ್ರದಲ್ಲಿ ನನಗೆ ಸೂಕ್ತವಾದ ಪಾತ್ರ ಸಿಕ್ಕಿದೆ' ಎಂದರು ಭಾವನಾ. 'ಹಾಗೆ ಸುಮ್ಮನೆ' ಚಿತ್ರದ ನಂತರ ಕಿರಣ್ ಹಿಂದಿ ಧಾರಾವಾಹಿಗಳಲ್ಲಿ ನಟಿಸುತ್ತಿದ್ದರು. 'ನಿರುತ್ತರ' ಚಿತ್ರ ಮತ್ತೆ ಅವರನ್ನು ಬೆಂಗಳೂರಿಗೆ ಕರೆತಂದಿದೆ.

ಕಲ್ಕತ್ತಾ ಮೂಲದ ನೀಲಾದ್ರಿ ಕುಮಾರ್ ಈ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ನೀಲಾದ್ರಿ, ಸಾಕಷ್ಟು ಆಲ್ಬಂಗಳನ್ನು ಹೊರತಂದಿದ್ದಾರೆ. 'ಚಿತ್ರದಲ್ಲಿ 7 ಹಾಡುಗಳಿವೆ. ಎಲ್ಲವೂ ಕಥೆಗೆ ಪೂರಕವಾಗಿವೆ' ಎಂದರು ನೀಲಾದ್ರಿ. ಬೆಂಗಳೂರು, ಹಿಮಾಚಲ ಪ್ರದೇಶ, ರಾಜಾಸ್ಥಾನ, ಗೋವಾ ಮುಂತಾದ ಕಡೆ 50 ದಿನಗಳ ಕಾಲ ಚಿತ್ರೀಕರಣ ನಡೆಯಲಿದೆ.



**ಉತ್ತರಗಳೇ ಇಲ್ಲದ ಕಥೆ**



# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
www.saramedianet.com